30ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.

ಸಿ.ಸಿ. ನಂಃ 6340/2023 ಪ್ರಾ.ಸಾ. 1 ಚಾ.ಸಾ.1

| | |
|---|---|
| ಸಾಕ್ಷಿಯ ಹೆಸರು | ಶ್ರೀಮತಿ ಹೇಮಾವತಿ |
| ಗಂಡನ ಹೆಸರು | ಹರೀಶ್ |
| ವಯಸ್ಸು | 34 ವರ್ಷ |
| ಉದ್ಯೋಗ | ಗೃಹಿಣಿ |
| ವಿಳಾಸ | ದೊಡ್ಡಬೆಟ್ಟಹಳ್ಳಿ , ಲೇಔಟ್, ಯಲಹಂಕ ಉಪನಗರ ಬೆಂಗಳೂರು. |

ಸಾಕ್ಷಿಯನ್ನು ಈ ದಿವಸ ದಿನಾಂಕಃ02-02-2024 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

ಮುಖ್ಯ ವಿಚಾರಣೆ ಃ **ಮಾನ್ಯ** ಹಿರಿಯ ಸ.ಸ.ಅ. ರವರಿಂದ.

ದಿಃ27-11-2022 ರಂದು ಸಂಜೆ 05-00 ಗಂಟೆ ಸಮಯಕ್ಕೆ ಅಡಕಮಾರನಹಳ್ಳಿಗೆ ನಾನು ಮತ್ತು ನನ್ನ ಮಕ್ಕಳು ನಮ್ಮ ಚಿಕ್ಕಪ್ಪನ ಮಗನ ಮದುವೆಗೆ ಹೋಗಿದ್ದೆವು. ಮರುದಿನ ಅಂದರೆ ದಿಃ28-11-2022 ರ ಬೆಳೆಗ್ಗೆ 08-00 ಗಂಟೆಗೆ ನನ್ನ ಗಂಡ ಚಾಸಾ-5 ಮತ್ತು ಅವರ ಜೊತೆ ಚಾಸಾ-4 ರವರು ನಮ್ಮ ಮನೆಯ ಬೀಗ ಹಾಕಿಕೊಂಡು ಅಡಕಮಾರನಹಳ್ಳಿ ಮದುವೆಗೆ ಬಂದಿರುತ್ತಾರೆ. ನಂತರ ಅದೇ ದಿನ ಮಧಾಹ್ನ 02-20 ಸಮಯಕ್ಕೆ ನಾವು ನಮ್ಮ ಮನೆಗೆ ಬಂದು ನೋಡಲಾಗಿ, ನಮ್ಮ ಮನೆಯ ಮುಖ್ಯ ಬಾಗಿಲಿನ ಡೋರ್ ನ ಲಾಕನ್ನು ಹೊಡೆದು ಬಾಗಿಲು ತೆರೆದಿದ್ದು, ನಮ್ಮ ಮನೆಯ ಬೆಡ್ರೂಂನಲ್ಲಿದ್ದ ಎರಡು ಕಬ್ಬಿಣದ ಬೀರಿನ ಲಾಕನ್ನು ಒಂದು ಕಬ್ಬಿಣದ ರಾಡ್ ನಿಂದ ಹೊಡೆದು ತೆಗೆದಿದ್ದು, ಸದರಿ ಬೀರುವಿನಲ್ಲಿದ್ದ ಎಲ್ಲಾ ಬಟ್ಟೆಗಳು ಚಲ್ಲಾಪಿಲ್ಲಿಯಾಗಿ ಹೊರಗೆ ಬಿದ್ದಿದ್ದು, ಬೀರುವಿನಲ್ಲಿದ್ದ

ಒಂದು ಚಿನ್ನದ ನೆಕ್ಲೆಸ್, ಚಿನ್ನದ 16 ಬಿಡಿ ಕಾಸುಗಳು, 18 ಚಿನ್ನದ ಗುಂಡುಗಳು, 2 ಚಿನ್ನದ ಕೈ ಬಳೆಗಳು, 2 ಬಂಗಾರದ ಕೊರಳಿನ ಚೈನ್ ಗಳು, 1 ದೊಡ್ಡ ಹಾಗೂ ಒಂದು ಚಿಕ್ಕ ಚಿನ್ನದ ಕೈ ಬ್ರಾಸ್ ಲೈಟ್, 6 ದೊಡ್ಡ ಮತ್ತು 2 ಚಿಕ್ಕ ಚಿನ್ನದ ಬೆರಳಿನ ಉಂಗುರಗಳು, 4 ಜೊತೆ ಚಿನ್ನದ ಕಿವಿ ಒಲೆಗಳು ಒಟ್ಟು 170 ಗ್ರಾಂ ಚಿನ್ನದ ಒಡವೆಯಾಗಿದ್ದು ಮತ್ತು ನಗದು ರೂ65,000 ಗಳು ಕಳ್ಳತನವಾಗಿದ್ದು, ಸದರಿ ಚಿನ್ನದ ಒಡವೆ ಮತ್ತು ನಗದನ್ನು ದಿಃ28-11-2022 ರಂದು ಯಾರೋ ಆಸಾಮಿಗಳು ಕಳ್ಳತನ ಮಾಡಿದ್ದು, ಈ ವಿಚಾರವಾಗಿ ನಾನು ಅದೇ ದಿನ ಸಂಜೆ ಯಲಹಂಕ ಉಪನಗರ ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಯು ಕಡತದಲ್ಲಿರುವ ದೂರು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಕ್ರಮವಾಗಿ ನಿಪಿ-1 ಮತ್ತು 1(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಪೋಲಿಸರು ನಮ್ಮ ಮನೆಯಹತ್ತಿರ ಶ್ವಾನ ದಳ ಮತ್ತು ಬೆರಳು ಮುದ್ರೆಯ ತಜ್ಞರೊಂದಿಗೆ ಬಂದು, ನಮ್ಮ ಮನೆಯಲ್ಲಾ ಪರಿಶೀಲನೆ ಮಾಡಿ ಸುಮಾರು ಎರಡು ಗಂಟೆಗಳ ಕಾಲ ಪರಿಶೀಲನೆ ಆದ ನಂತರ ಒಂದು ದಾಖಲೆಗೆ ನನ್ನಿಂದ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಚಾಸಾ-2 ಮತ್ತು 3 ರವರು ಹಾಜರಿದ್ದರು. ಸಾಕ್ಷಿಯು ಕಡತದಲ್ಲಿರುವ ಸ್ಥಳ ಪಂಚನಾಮೆ ಮತ್ತು ಅದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 2 (ಎ) ಎಂದು ಗುರುತಿಸಲಾಯಿತು.

ನಂತರ ಪೋಲೀಸರು ನಮ್ಮನ್ನು ದೂರು ಕೊಟ್ಟ ಒಂದು ತಿಂಗಳ ನಂತರ ಠಾಣೆಗೆ ಕರೆಯಿಸಿ, ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಗಳು ಇವರೇ ಎಂದು ಆರೋಪಿ 1 ಮತ್ತು 2 ರನ್ನು ತೋರಿಸಿರುತ್ತಾರೆ. ನಂತರ ಆರೋಪಿತರಿಂದ ವಶಪಡಿಸಿಕೊಂಡ ಬಂಗಾರದ ಒಡವೆಗಳನ್ನು ಹಾಗೂ ನಗದು ಹಣವನ್ನು ನಮಗೆ ತೋರಿಸಿದ್ದು, ಸದರಿ ಆರೋಪಿತರಿಂದ ವಶಪಡಿಸಿಕೊಂಡ ಬಂಗಾರದ ಒಡವೆಗಳು ನಮಗೆ ಸೇರಿದ್ದಾಗಿದ್ದು, ಅವುಗಳನ್ನು ಗುರುತಿಸಿರುತ್ತೇನೆ. ಸದರಿ ಬಂಗಾರದ ಒಡವೆಗಳೆಂದರೆ 3 ಜೊತೆ ಬಂಗಾರದ ಕಿವಿ ಒಲೆಗಳು, 8 ಚಿನ್ನದ ಕಾಸುಗಳು, ಚಿನ್ನದ 16 ಗುಂಡುಗಳು, 3 ಚಿನ್ನದ ಕೊರಳಿನ ಚೈನ್ ಗಳು, 4 ಚಿನ್ನದ ಉಂಗುರಗಳು, ಒಂದು ಕೈ ಚೈನ್ ಹಾಗೂ ಹತ್ತು ಸಾವಿರ ನಗದನ್ನು ಅವುಗಳನ್ನು ಗುರುತಿಸಿ, ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ತನಿಖಾಧಿಕಾರಿಗಳು ನನ್ನ ವಶಕ್ಕೆ ನೀಡಿರುತ್ತಾರೆ. ಸಾಕ್ಷಿಯು ಸದರಿ ಒಡವೆ ಮತ್ತು ಹಣವನ್ನು ಪಡೆಯುವ ಕಾಲಕ್ಕೆ ಪೋಲಿಸರು ತಯಾಗಿಸಿದ ಪಂಚನಾಮೆ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 3 (ಎ) ಎಂದು ಗುರುತಿಸಲಾಯಿತು. ಸದರಿ ಬಿಡುಗಡೆ ಕಾಲಕ್ಕೆ ತನಿಖಾಧಿಕಾರಿಗಳು ತೆಗೆದ ಬಂಗಾರದ ಒಡವೆ ಮತ್ತು ನಗದು ಹಣದ 8 ಭಾವಚಿತ್ರಗಳನ್ನು ಕ್ರಮವಾಗಿ ನಿಪಿ-4 ರಿಂದ 11 ಎಂದು ಗುರುತಿಸಲಾಯಿತು.

ನಂತರ ಈ ಬಗ್ಗೆ ಪೋಲಿಸರು ನನ್ನಿಂದ ಹೇಳಿಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಕ 20-02-2024 ರಂದು ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿಎನ್‌ಎನ್ ನ್ಯಾಯವಾದಿಯವರಿಂದ

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಘಟನೆ ನಡೆಯಿತು ಎಂದು ಹೇಳುವ ಹಿಂದಿನ ದಿನ ದಿಃ27-11-2022 ರಂದು ನನ್ನ ಮಾವ ಚಿಕ್ಕಪ್ಪನ ಮಗನ ಮದುವೆಗೆ ಹೋಗಿರುತ್ತಾರೆ. ಸದರಿ ಮದುವೆಗೆ ದಿಃ27-11-2022 ರಂದು 2 ನೇ ಆರೋಪಿ ಭಾಗ್ಯ ಹಾಗೂ ನಾನು ಹೋಗಿದ್ದೆವು. ನಂತರ ದಿಃ28-11-2022 ರಂದು ಬೆಳಗ್ಗೆ 1 ನೇ ಆರೋಪಿ ಗಂಡ ಮತ್ತು ನನ್ನ ಗಂಡ ಬಂದಿರುತ್ತಾರೆ. ನಮ್ಮ ಅಕ್ಕಪಕ್ಕದಲ್ಲಿ ಸಾಕಷ್ಟು ವಾಸದ ಮನೆಗಳಿರುತ್ತವೆ ಎಂದರೆ ಸರಿ. ಅಲ್ಲಿ ಅಂದರೆ ನಮ್ಮ ಮನೆಯ ಹತ್ತಿರ ಸಿಸಿಟಿವಿ ಯನ್ನು ಅಳವಡಿಸಿರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ನಂತರ ಮದುವೆ ಮುಗಿಸಿಕೊಂಡು ದಿಃ28-11-2022 ರಂದು ಮಧ್ಯಾಹ್ನ 02-30 ಸಮಯಕ್ಕೆ ಮೊದಲೆ ನನ್ನ ಗಂಡ ಚಾಸಾ-5 ರವರು ಬಂದಿರುತ್ತಾರೆ. ಸದರಿ ಚಾಸಾ-5 ರವರೊಂದಿಗೆ 2 ನೇ ಆರೋಪಿಯ ಗಂಡ ಚಾಸಾ-4 ರವರು ಬಂದಿದ್ದರಾ? ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಮದುವೆಯಿಂದ ಬಂದಿದ್ದು ಆದರೆ ಮನೆಗೆ ಬಂದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾವು ಅದೇ ದಿನ ಮಧ್ಯಾಹ್ನ 03-00 ರಿಂದ 03-30 ಸಮಯಕ್ಕೆ ಮನೆಗೆ

ಬಂದಿರುತ್ತೇವೆ. ನಾವು ಆ ದಿನ ಮದುವೆಗೆ ನಾನು ಮತ್ತು ನಮ್ಮ ಕುಟುಂಬದರವರು ಎಲ್ಲಾ ಒಡವೆಗಳನ್ನು ಹಾಕಿಕೊಂಡು ಹೋಗಿದ್ದೆವು ಎಂದರೆ, ಸಾಕ್ಷಿಯು ಎಲ್ಲಾ ಒಡವೆಗಳನ್ನು ಹಾಕಿಕೊಂಡು ಹೋಗಿರಲಿಲ್ಲ ಎಂದು ನುಡಿಯುತ್ತಾರೆ.

ನಾವು ನಮ್ಮ ಮನೆಯಲ್ಲಿ ಆ ದಿನ ಒಂದು ಬಂಗಾರದ ನೆಕ್ಲೆಸ್, 16 ಬಂಗಾರದ ಬಿಡಿಗಾಸುಗಳು, 18 ಬಂಗಾರದ ಗುಂಡುಗಳು, 2 ಬಂಗಾರದ ಕೊರಳಿನ ಚೈನ್, 2 ಬಂಗಾರದ ಬಳೆಗಳು, ಜೊತೆ ಬಂಗಾರದ ಕಿವಿ ಒಲೆಗಳು, 2 ಚಿಕ್ಕ ಬಂಗಾರದ ಉಂಗುರಗಳು, 6 ಬಂಗಾರದ ಉಂಗುರಗಳು, 1 ದೊಡ್ಡ ಬಂಗಾರದ ಕೈ ಚೈನ್, ಮತ್ತು 2 ಬಂಗಾರದ ಚಿಕ್ಕ ಕೈ ಚೈನ್ ಗಳನ್ನು ಇಟ್ಟುಹೋಗಿದ್ದೆವು.

2 ನೇ ಆರೋಪಿಯು ಆ ದಿನ ಮದುವೆಗೆ ಬಂಗಾರದ ಒಡವೆಗಳನ್ನು ಹಾಕಿಕೊಂಡು ಬಂದಿರುವುದು ನನಗೆ ಗೊತ್ತಿಲ್ಲ. ನಾವು ಆದಿನ ಮನೆಗೆ ಹೋದಾಗ, ಸುಮಾರು 2 ಗಂಟೆಗಳ ಕಾಲ ಮನೆಯಲ್ಲಿ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಇರುವುದನ್ನು ನೋಡಿ ಪೋಲಿಸರಿಗೆ ತಿಳಿಸಿ ಅವರು ಬರುವವರೆಗೂ ಸುಮಾರು 2 ಗಂಟೆಗಳ ಕಾಲ ಮನೆಯಲ್ಲಿ ಇದ್ದೆವು. ನಮ್ಮ ಮನೆಯಿಂದ ಪೋಲಿಸ್ ಠಾಣೆ ಸುಮಾರು 2 ಕಿ.ಮೀ ದೂರ ಇರುತ್ತದೆ. ನಾವು ಆದಿನ ಪೋಲಿಸರಿಗೆ ದೂರವಾಣಿ ಮೂಲಕ ಘಟನೆ ಬಗ್ಗೆ ಮಾಹಿತಿ

ನೀಡಿದ್ದು, ನಾವು ಮಾಹಿತಿ ನೀಡಿದ ಸುಮಾರು 05 ರಿಂದ 10 ನಿಮಿಷಕ್ಕೆ ಅಂದರೆ 03-00 ರಿಂದ 03-30 ಸಮಯಕ್ಕೆ ಪೋಲಿಸರು ಮನೆಯ ಹತ್ತಿರ ಬಂದಿರುತ್ತಾರೆ. ಆ ದಿನ ಸುಮಾರು 10-15 ಜನ ಪೋಲಿಸರು ಬಂದಿದ್ದರು.

ನಾವು ಆ ದಿನ ಪೋಲಿಸರೊಂದಿಗೆ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ನಿಪಿ-1 ದೂರನ್ನು ಪೋಲಿಸರು ನಾನು ಹೇಳಿದಂತೆ ಅವರು ಬರೆದಿರುತ್ತಾರೆ. ಅದು ಯಾವ ಪೋಲಿಸರು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಳ್ಳತನ ಆದ ಬಂಗಾರದ ಒಡವೆಗಳಲ್ಲಿ ಕೆಲವುಗಳ ಬಗ್ಗೆ ಮಾತ್ರ ಎಷ್ಟು ತೂಕವಿರುತ್ತದೆ ಎಂದು ಪೋಲಿಸರಿಗೆ ಹೇಳಿರುತ್ತಾರೆ. ಸದರಿ ಕಳ್ಳತನ ಆಗಿರುತ್ತವೆ ಎಂದು ಒಡವೆಗಳು ತನಗೆ ಸೇರಿದ್ದಾಗಿರುತ್ತದೆ ಎಂಬುದರ ಬಗ್ಗೆ ದಾಖಲೆಗಳನ್ನು ಪೋಲಿಸರು ಕೇಳಿರುವುದಿಲ್ಲ, ಆದ್ದರಿಂದ ಅವರಿಗೆ ನೀಡಿರುವುದಿಲ್ಲ. ನಾನು ನ್ಯಾಯಾಲಯದ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಬಿಡುಗಡೆ ಮಾಡಿಸಿಕೊಂಡ ಒಡವೆಗಳನ್ನು ಮತ್ತು 5,000/- ರೂ. ನಗದು ಹಣವನ್ನು ನಾನು ಈ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಬೇಕಾದರೆ ಹಾಜರು ಪಡಿಸುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಾವು ಆದಿನ ದೂರು ನೀಡಿದಾಗ, ಸಂಜೆ ಸಮಯವಾಗಿದ್ದು ನನಗೆ ನಿಖರವಾಗಿ ಎಷ್ಟು ಗಂಟೆಯಾಗಿತ್ತು ಎಂದು ಹೇಳಲಾಗುವುದಿಲ್ಲ.

ನಂತರ ಪೋಲಿಸರು ದಿ:29-11-2022 ರಂದು ಬೆಳಿಗ್ಗೆ 10-00 ಗಂಟೆಯ ಸಮಯದಲ್ಲಿ ಮನೆಯ ಹತ್ತಿರ ಬಂದಿದ್ದರು. ಆಗ ಪೋಲಿಸರು ಮನೆ ಹತ್ತಿರ ಇರುವ ಸಿಸಿಟಿವಿ ಕ್ಯಾಮರ ಇರುವ ಬಗ್ಗೆ ಪರೀಕ್ಷಿಸಿ ಹೋಗಿರುತ್ತಾರೆ. ಆಗ ಅವರು 1 ಗಂಟೆ ಕಾಲದ ವರೆಗೆ ವಿಚಾರಣೆ ಮಾಡಿರುತ್ತಾರೆ. ಆ ದಿನ ಪೋಲಿಸರು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ.

ನನ್ನ ಗಂಡ ಮತ್ತು 2 ನೇ ಆರೋಪಿ ಗಂಡನ ಮಧ್ಯೆ ನಮ್ಮ ಮಾವ ಮನೆಗಳನ್ನು ವಿಭಾಗ ಮಾಡಿದ ಬಗ್ಗೆ ಪರಸ್ಪರ ವ್ಯಾಜ್ಯವಿರುತ್ತದೆ ಎಂದರೆ ಸರಿಯಲ್ಲ. ಪೋಲಿಸರು ನಾನು ದೂರು ಕೊಟ್ಟ 1 ತಿಂಗಳ ನಂತರ ಕರೆಸಿದ್ದು, ಅದು ಯಾವ ದಿನಾಂಕ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರು ಠಾಣೆಗೆ ಕರೆದು, ನಮಗೆ ಒಡವೆಗಳನ್ನು ತೋರಿಸಿದಾಗ, ನಾವು ಸದರಿ ತಮಗೆ ಸೇರಿದ ಒಡವೆಗಳ ತೂಕವನ್ನು ಪೋಲಿಸರು ಹೇಳಿದ್ದು, ನಾನು ಹೇಳಿರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ನನ್ನ ದೂರಿನಲ್ಲಿ ಹೇಳಿರುವಂತೆ ನಾನು ಯಾವುದೇ ಒಡವೆಗಳನ್ನು ಮನೆಯಲ್ಲಿ ಇಟ್ಟಿರಲಿಲ್ಲ , ಎಲ್ಲಾ ಬಂಗಾರದ ಒಡವೆಗಳನ್ನು ನಾವು ಮತ್ತು ನಮ್ಮ ಮನೆಯವರು ಮದುವೆಗೆ ಹಾಕಿಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಘಟನೆ ಸಂಬಂಧಿಸಿದಂತೆ ಪೋಲಿಸರು ಯಾವುದೇ ಸ್ಥಳ ಮಹಾಜರ್ ನ್ನು ಮಾಡಿರುವುದಿಲ್ಲ ಮತ್ತು ನಂತರದಲ್ಲಿ ಠಾಣೆಗೆ ಹೋಗಿ ಯಾವುದೇ ಒಡವೆಗಳನ್ನು ನಾವು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಮತ್ತು 2 ನೇ ಆರೋಪಿತರ ಮಧ್ಯೆ ಮನೆಗಳ ವಿಭಾಗದ ಸಂಬಂಧ ವ್ಯಾಜ್ಯವಿರುವ ಕಾರಣ ಅವರು ತಮ್ಮ ಪಾಲಿಗೆ ಬಿಟ್ಟಿರುವ ಮನೆಗಳನ್ನು ಕೇಳುತ್ತಾರೆ ಎಂಬ ಕಾರಣಕ್ಕಾಗಿ, ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

30ನೇ ಅ.ಮು.ಮ.ದಂ. ಬೆಂಗಳೂರು.